*

<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C:3075/2023
CW- 6 PW-2

ಹೆಸರು : ಭೀಮರಾಯ

ತಂದೆಯ ಹೆಸರು : ಸಾಹೆಬ್ ಗೌಡ ಚೆಟ್ಟರ್

ವಯಸ್ಸು : 42 ವರ್ಷ

ಉದ್ಯೋಗ : ಒಕ್ಕಲುತನ

ವಾಸ ಸ್ಥಳ : ಹುಳಗೋಳ

---

<u>ಪ್ರಮಾಣವಚನ ಭೋಧಿಸಲಾಯಿತು. ದಿಃ 17.02.2026</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ಚಾಸಾ- 1 ನನ್ನ ಹೆಂಡತಿ. ಚಾಸಾ-7 ರಿಂದ 14 ರವರ ಪರಿಚಯ ಇದೆ. ನ್ಯಾಯಾಲಯದ ಮುಂದಿರುವ ಆರೋಪಿತನನ್ನು ಈ ಮೊದಲು ನೋಡಿಲ್ಲ.

ದಿಃ 25.04.2023ರಂದು ಕಲಬುರಗಿ ಯಾದಗಿರಿ ರಾಷ್ಟ್ರೀಯ ಹೆದ್ದಾರಿ 150 ರ ಸಂಕನೂರು ಕ್ರಾಸ್ ಬಳಿ ಚಾಸಾ-6ರವರು ತಮ್ಮ ಮೋಟಾರ್ ಸೈಕಲ್ ಮೇಲೆ ಸಿದ್ದಣ್ಣ ಕಂಬಾರ್ ಇವರನ್ನು ಕರೆದುಕೊಂಡು ನಾಲ್ವಾರದ ರೈತ ಸಂಪರ್ಕ ಕೇಂದ್ರಕ್ಕೆ ಹೊರಟರುತ್ತಾರೆ. ಅವರು ಹೊರಟ ನಂತರ ಅವರ ಮೋಟಾರ್ ಸೈಕಲ್‌ಗೆ ಅಪಘಾತ ಆಗಿದೆ ಎಂದು ತಿಳಿದು ಬಂತು. ನಾನು ಅಪಘಾತದ ಮಾಹಿತಿ ತಿಳಿದ ನಂತರ ಅಪಘಾತದ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಅಲ್ಲಿ ಹೋದಾಗ ಚಾಸಾ-6 ಮತ್ತು ಸಿದ್ದಣ್ಣ ಕಂಬಾರ್ ಇವರಿಗೆ ಅಪಘಾತವಾಗಿ ಗಾಯಗಳಾಗಿದ್ದು ಕಂಡು ಬಂತು. ಅಬರಿಬ್ಬರನ್ನೂ ಕಲಬುರಗಿಯ ಮಣ್ಣೂರು ಆಸ್ಪತ್ರೆಗೆ ಸೇರಿಸಿರುತ್ತೇವೆ.

ದಿಃ 26.04.2023ರಂದು ಸದರಿ ಸಿದ್ದಣ್ಣ ಕಂಬಾರ್ ಇವರು ತೀರಿಕೊಂಡಿದ್ದು ತಿಳಿದುಬಂತು. ನಾನು ಅಪಘಾತವನ್ನು ನೋಡಿಲ್ಲ ಯಾರ ತಪ್ಪಿನಿಂದ ಅಪಘಾತ ಆಗಿದೆ ಎಂದು ಗೊತ್ತಿಲ್ಲ. ನಾನು ಆಸ್ಪತ್ರೆಯಲ್ಲಿದ್ದಾಗ ಪೋಲೀಸರು ನನ್ನ ಸಹಿಗಳನ್ನು ಕೆಲವು ದಾಖಲೆಗಳ ಮೇಲೆ ಪಡೆದಿರುತ್ತಾರೆ. ಸದರಿ

ದಾಖಲೆಗಳಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಮಾಹಿತಿ ಇಲ್ಲ. ನಾನು ಪೋಲೀಸರ ಬಳಿ ಯಾವುದೇ ಹೇಳಿಕೆ ಅಥವಾ ಮರು ಹೇಳಿಕೆ ನೀಡಿಲ್ಲ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ</u>

ದಿಃ 26.04.2023ರಂದು ನಾನು -------------------ನಿಜವಿದೆ ಎಂದು ಹೇಳಿಕೆಯನ್ನು ನೀಡಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ಈಗ ಅಲ್ಲಗಳೆದ ಹೇಳಿಕೆಯನ್ನು ನಿಪಿ- 3 ಎಂದು ಗುರುತಿಸಲಾಯಿತು. ನಿಪಿ- 3ರಂತೆ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿತನೊಂದಿಗೆ ರಾಜಿ ಮಾಡಿಕೊಂಡು ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ.ಎಮ್.ವಿ.ಎಲ್. ವಕೀಲರಿಂದ - ಏನು ಇಲ್ಲ</u>

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,
ಚಿತ್ತಾಪೂರ.

*

<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C No. 3075/2023
CW-1 PW-1

ಹೆಸರು : ಭಾಗ್ಯಲಕ್ಷ್ಮಿ

ಗಂಡನ ಹೆಸರು: ಭೀಮ್ ರಾಯ್ ಚಟ್ಲಾರ್

ವಯಸ್ಸು : 33 ವರ್ಷ

ಉದ್ಯೋಗ : ಗೃಹಿಣಿ

ವಾಸ ಸ್ಥಳ : ಹುಳುಗೋಳು ಸೇಡಂ

---

<u>ಪ್ರಮಾಣವಚನ ಬೋಧಿಸಲಾಯಿತು. ದಿಃ 17-02-2026</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ಚಾಸಾ-6 ನನ್ನ ಗಂಡ. ಚಾಸಾ-7 ರಿಂದ 14 ರವರ ಪರಿಚಯ ಇದೆ. ನ್ಯಾಯಾಲಯದ ಮುಂದಿರುವ ಆರೋಪಿತನನ್ನು ಈ ಮೊದಲು ನೋಡಿಲ್ಲ.

ದಿಃ 25.04.2023ರಂದು ಕಲಬುರಗಿ ಯಾದಗಿರಿ ರಾಷ್ಟ್ರೀಯ ಹೆದ್ದಾರಿ 150 ರ ಸಂಕನೂರು ಕ್ರಾಸ್ ಬಳಿ ಚಾಸಾ-6ರವರು ತಮ್ಮ ಮೋಟಾರ್ ಸೈಕಲ್ ಮೇಲೆ ಸಿದ್ದಣ್ಣ ಕಂಬಾರ್ ಇವರನ್ನು ಕರೆದುಕೊಂಡು ನಾಲ್ವಾರದ ರೈತ ಸಂಪರ್ಕ ಕೇಂದ್ರಕ್ಕೆ ಹೊರಟರುತ್ತಾರೆ. ಅವರು ಹೊರಟ ನಂತರ ಅವರ ಮೋಟಾರ್ ಸೈಕಲ್‌ಗೆ ಅಪಘಾತ ಆಗಿದೆ ಎಂದು ತಿಳಿದು ಬಂತು. ನಾನು ಅಪಘಾತದ ಮಾಹಿತಿ ತಿಳಿದ ನಂತರ ಅಪಘಾತದ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಅಲ್ಲಿ ಹೋದಾಗ ಚಾಸಾ-6 ಮತ್ತು ಸಿದ್ದಣ್ಣ ಕಂಬಾರ್ ಇವರಿಗೆ ಅಪಘಾತವಾಗಿ ಗಾಯಗಳಾಗಿದ್ದು ಕಂಡು ಬಂತು. ಅಬರಿಬ್ಬರನ್ನೂ ಕಲಬುರಗಿಯ ಮಣ್ಣೂರು ಆಸ್ಪತ್ರೆಗೆ ಸೇರಿಸಿರುತ್ತೇವೆ.

ದಿಃ 26.04.2023ರಂದು ಸದರಿ ಸಿದ್ದಣ್ಣ ಕಂಬಾರ್ ಇವರು ತೀರಿಕೊಂಡಿದ್ದು ತಿಳಿದುಬಂತು. ನಾನು ಅಪಘಾತವನ್ನು ನೋಡಿಲ್ಲ ಯಾರ ತಪ್ಪಿನಿಂದ ಅಪಘಾತ ಆಗಿದೆ ಎಂದು ಗೊತ್ತಿಲ್ಲ. ನಾನು ಆಸ್ಪತ್ರೆಯಲ್ಲಿದ್ದಾಗ ಪೋಲೀಸರು ನನ್ನ ಸಹಿಗಳನ್ನು ಕೆಲವು ದಾಖಲೆಗಳ ಮೇಲೆ ಪಡೆದಿರುತ್ತಾರೆ. ಸದರಿ

ದಾಖಲೆಗಳಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಮಾಹಿತಿ ಇಲ್ಲ. ಸಾಕ್ಷಿಗೆ ಈಗ ಒಂದು ದೂರನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ ಕಾರಣ ಸದರಿ ದೂರನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 1ಎ ಎಂದು ಗುರುತಿಸಲಾಯಿತು. ನನ್ನ ಪ್ರಕಾರ ಆರೋಪಿತನ ತಪ್ಪಿ ನಿಂದ ಯಾವುದೇ ಅಪಘಾತ ಆಗಿಲ್ಲ, ನನಗೆ ನಿಪಿ-1ರಲ್ಲಿ ಏನು ಬರೆಯಲಾಗಿದೆ ಎಂದು ಮಾಹಿತಿ ಇಲ್ಲ. ನಾನು ಪೋಲೀಸರ ಬಳಿ ಯಾವುದೇ ಹೇಳಿಕೆ ಅಥವಾ ಮರು ಹೇಳಿಕೆ ನೀಡಿಲ್ಲ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ</u>

ದಿಃ 25.04.2023ರಂದು ನಿಮ್ಮ ಗಂಡ ಚಾಸಾ-6ರವರು ಬೆಳಿಗ್ಗೆ 11.30 ಗಂಟೆಗೆ ತನ್ನ ಮೋಟಾರ್ ಸೈಕಲ್ ಸಂಖ್ಯೆ KA-32-EL-3440ನೇದ್ದರ ಮೇಲೆ ಸಿದ್ದಣ್ಣ ಕಂಬಾರ್ ಇವರನ್ನು ಕೂರಿಸಿಕೊಂಡು ಹುಳುಗೋಳು ಗ್ರಾಮದಿಂದ ಲಾಡ್ಲಾಪುರ್ ಮಾರ್ಗವಾಗಿ ರೈತ ಸಂಪರ್ಕ ಕೇಂದ್ರಕ್ಕೆ ಹೋಗುತ್ತಿದ್ದಾಗ ಆರೋಪಿತನು ಎದುರಿನಿಂದ ತನ್ನ ಕಾರ್ ಸಂಖ್ಯೆ KA-01-ML-1123 ನೇದ್ದನ್ನು ಅತಿ ವೇಗ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಚಾಸಾ-6ರವರು ಚಲಾಯಿಸುತ್ತಿದ್ದ ಬೈಕ್ ಗೆ ಡಿಕ್ಕಿಪಡಿಸಿದ ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ಚಾಸಾ-6ರವರಿಗೆ ಮತ್ತು ಸಿದ್ದಣ್ಣ ಕಂಬಾರ್ ರವರಿಗೆ ಭಾರೀ ರಕ್ತದ ಗಾಯಗಳಾಗಿದ್ದವು ಎಂದರೆ ಸರಿಯಲ್ಲ. ಆದ ಕಾರಣ ನೀವು ಅವರಿಬ್ಬರನ್ನು ಚಿಕಿತ್ಸೆಗಾಗಿ ಮಣ್ಣೂರು ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು ಎಂದರೆ ಸರಿಯಲ್ಲ. ಈ ಅಪಘಾತದ ಕುರಿತು ನೀವು ನಿಪಿ-1ರಂತೆ ದೂರು ನೀಡಿದ್ದೀರಿ ಎಂದರೆ ಸರಿಯಲ್ಲ.

ದಿಃ 26.04.2023ರಂದು ಸದರಿ ಸಿದ್ದಣ್ಣ ಕಂಬಾರ್ ತೀರಿಕೊಂಡಿದ್ದಾನೆಂದು ತಿಳಿದ ನಂತರ ನೀವು ದಿಃ 30.05.2023ರಂದು ನಾನು -------------------ನಿಜವಿರುತ್ತದೆ ಎಂದು ಪುರವಣಿ ಹೇಳಿಕೆಯನ್ನು ನೀಡಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ಈಗ ಅಲ್ಲಗಳೆದ ಪುರವಣಿ ಹೇಳಿಕೆಯನ್ನು ನಿಪಿ- 2 ಎಂದು ಗುರುತಿಸಲಾಯಿತು. ನಿಪಿ- 2ರಂತೆ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿತನೊಂದಿಗೆ ರಾಜಿ ಮಾಡಿಕೊಂಡು ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿ ಪರ ಶ್ರೀಮತಿ.ಎಮ್.ವಿ.ಎಲ್. ವಕೀಲರಿಂದ - ಏನು ಇಲ್ಲ

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,

ಚಿತ್ತಾಪೂರ.